ಅಸಲು ದಾವೆ ಸಂಖ್ಯೆ - 187/2018
ಪಿಡಬ್ಲ್ಯೂ - 01
ದಿನಾಂಕಃ 09.09.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ನಂ.**6** ರ ಪರ ಶ್ರೀ.ಸಿ ಎಸ್ ಎಂ ವಕೀಲರಿಂದ</u>

ಈ ದಾವೆಯನ್ನು ನಾನು ಮತ್ತು ನನ್ನ ತಾಯಿ, ಸಹೋದರ, ಸಹೋದರಿಯರು ಎಲ್ಲರೂ ಸೇರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ, ನಾನು ಒಬ್ಬನೇ ಮಾಡಿರುತ್ತೇನೆ. ನಾನು ಈ ದಾವೆಯನ್ನು ನನ್ನ ತಂದೆಯ ವಿರುದ್ದ ಮಾಡಿದ್ದೇನೆ. ನಾನು ಈ ದಾವೆಯನ್ನು ಸರ್ವೆ ನಂ.74 ರ ಆಸ್ತಿಯ ಮೇಲೆ ಮಾತ್ರ ಮಾಡಿದ್ದೇನೆ . ನಾನು ಈ ದಾವೆಯನ್ನು ಒಂದು ಜಮೀನಿನ ಮೇಲೆ ಮಾತ್ರ ಮಾಡಿರುತ್ತೇನೆ ಸಾಕ್ಷಿ ಮುಂದುವರೆದು ಹೊಲ ಮತ್ತು ಮನೆ ಜಾಗದ ಮೇಲೆ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ಈ ದಾವೆ ಹೂಡಿದಾಗ ನನಗೆ ವಯಸ್ಸು 26 ಇತ್ತು. 2003 ರಲ್ಲಿ ನನಗೆ ವಯಸ್ಸು 15 ವರ್ಷ ಇತ್ತು. ಯಲ್ಲಪ್ಪ ನಿಂಗಪ್ಪ ಮಲ್ಲೂರು ನನ್ನ ಅಜ್ಜ. ನಿಂಗಪ್ಪನ ತಂದೆ ಹೆಸರು ಏನು ಅಂತಾ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನನ್ನ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿ ಹೇಗೆ ನನಗೆ ಬಂದಿರುತ್ತದೆ ಅಂತಾ ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು 3 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ದಾವಾ ಆಸ್ತಿಯ ಪಹಣಿಯ ಕಾಲಂ ನಂ.6 ರಲ್ಲಿ ಸರಕಾರದ ಆಸ್ತಿ ಅಂತಾ ಇರುತ್ತದೆ ಎಂದರೆ ಸರಿ. ಕಾಲಂ ನಂ.11 ರಲ್ಲಿ ಮಂಜೂರಾದ ಆಸ್ತಿ ಅಂತಾ ಬರೆದಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಸರಕಾರದ ಆಸ್ತಿ ಎಂದರೆ ನಾನು ಸಾಗುವಳಿ ಮಾಡುತ್ತಿರುತ್ತೇವೆ. ಕಾರಣ ದಾವಾ ಆಸ್ತಿ ಹಿರಿಯರಿಂದ ಬಂದಿದೆ ಅಂತಾ ತೋರಿಸಲು ದಾಖಲೆ ಇಲ್ಲ ಎಂದರೆ ಸರಿಯಲ್ಲ, ನನ್ನ ಅಜ್ಜನಿಂದ ಬಂದಿರುತ್ತದೆ, ನನ್ನ ಅಜ್ಜ ಸಾಗುವಳಿ ಮಾಡುತ್ತಿದ್ದ. ಸರ್ವೆ ನಂ.39, 3 ಎಕರೆ 10 ಗುಂಟೆ ಜಮೀನು ನನ್ನ ತಮ್ಮನ ಹೆಸರಿನಲ್ಲಿರುತ್ತದೆ ಎನ್ನುವುದು ಸರಿ. ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಅದಕ್ಕೆ ಉತಾರೆ ಇಲ್ಲ ಅಂತಾ ನುಡಿಯುತ್ತಾರೆ. ಸದರಿ ವಾದಪತ್ರದಲ್ಲಿ ಸದರಿ ಜಮೀನಿಗೆ ಪಹಣಿ ಇರುವುದಿಲ್ಲ ಅಂತಾ ಬರೆಸಿಲ್ಲ ಎಂದರೆ ಸರಿ. ನಾವು ಚಿಕ್ಕವರಿದ್ದಾಗ ನಮ್ಮ ಮನೆತನದ ಹಿರಿತನವನ್ನು ನನ್ನ ಅಜ್ಜ ಮಾಡುತ್ತಿದ್ದ, ನನ್ನ ಅಜ್ಜ ತೀರಿಕೊಂಡ ನಂತರ ನಮ್ಮ ತಾಯಿ ಹಿರಿತನ ಮಾಡುತ್ತಿದ್ದರು. ಈ ವಿಷಯವನ್ನು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಕೂಡಿ ಹಿರಿತನ ಮಾಡುತ್ತೇವೆ. 2003 ರಲ್ಲಿ ನನಗೆ 5-6

ವರ್ಷ ವಯಸ್ಸು ಇತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ಮನೆತನದ ಕಷ್ಟಕ್ಕಾಗಿ ಮತ್ತು ಸಾಲ ಮಾಡಿದ್ದ ಎಂದರೆ ಸರಿಯಲ್ಲ. 2003 ರಲ್ಲಿ ನಮ್ಮ ಮನೆಯ ಪರಿಸ್ಥಿತಿ ಹೇಗೆ ಇತ್ತು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಆಗ ನನ್ನ ತಾಯಿ ದುಡಿದು ತಂದು ಹಾಕುತ್ತಿದ್ದಳು, ನಾವು ತಿನ್ನುತ್ತಿದ್ದೆವು. ದಿನಾಂಕಃ 29.08.2003 ರಲ್ಲಿ ನನ್ನ ತಂದೆ ದಾವಾ ಆಸ್ತಿ ಮಾರಾಟಕ್ಕೆ ಹಚ್ಚಿದ್ದ ಎಂದರೆ ಸರಿಯಲ್ಲ. ಆತನಿಗೆ ಕುಡಿಸಿ ಬರೆಸಿಕೊಂಡಿರುತ್ತಾರೆ. ಆತನಿಗೆ ದುಡ್ಡು ಕೊಟ್ಟಿಲ್ಲ. ಆಗಿನಿಂದ ಇಲ್ಲಿಯವರೆಗೆ ದೂರು ಕೊಟ್ಟಿಲ್ಲ ಎಂದರೆ ಸರಿ. ದಿನಾಂಕಃ 29.08.2003 ರಂದು ದಾವಾ ಆಸ್ತಿ ಮಾರಾಟ ಮಾಡಿದಾಗ ದಾವಾ ಆಸ್ತಿಯಲ್ಲಿ ಮನೆ ಇತ್ತು. ಆ ಸಮಯದಲ್ಲಿ ದಾವಾ ಆಸ್ತಿ ಖುಲ್ಲಾ ಆಸ್ತಿ ಇತ್ತು ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯಲ್ಲಿ ಮನೆ ಇತ್ತು ಅಂತಾ ವಾದಪತ್ರದಲ್ಲಿ ಬರೆಸಿದ್ದೇನೆ. ದಿನಾಂಕಃ 29.08.2003 ರ ಖರೀದಿ ಪತ್ರದ ಪ್ರಕಾರ 6 ನೇ ಪ್ರತಿವಾದಿಯ ಹೆಸರು ಸಂಬಂಧಿಸಿದ ಪಂಚಾಯತಿಯ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಈಗಲೂ ಸಹ ನನ್ನ ಅಜ್ಜನ ಹೆಸರಿನಲ್ಲಿರುತ್ತದೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಖರೀದಿ ಮಾಡಿದಾಗಿನಿಂದ ಪ್ರತಿವಾದಿ ನಂ.6 ದಾವಾ ಆಸ್ತಿಯ ಕಬ್ಜಾದಲ್ಲಿರುತ್ತಾನೆ ಎಂದರೆ ಆತನಿಗೆ ಕೊಟ್ಟಿಲ್ಲ, ಆತ ದುಟಾಯಿತನದಿಂದ ತೆಗೆದುಕೊಂಡಿರುತ್ತಾನೆ. ಸದರಿ ದಾವಾ ಆಸ್ತಿಯನ್ನು ನನ್ನ ತಂದೆ ಮಾರಾಟ ಮಾಡಿರುತ್ತಾನೆ ಅಂತಾ ನನಗೆ 2003 ರಲ್ಲಿ ಗೊತ್ತಿತ್ತು ಎಂದರೆ ಸರಿ. ಸದರಿ ಖರೀದಿಪತ್ರವನ್ನು ಇಲ್ಲಿಯವರೆಗೆ ಪ್ರಶ್ನೆ ಮಾಡಿಲ್ಲ ಎನ್ನುವುದು ಸರಿ . ಪ್ರತಿವಾದಿ ನಂ.6 ನನ್ನ ತಂದೆಯಿಂದ ದಾವಾ ಆಸ್ತಿ ಖರೀದಿ ಮಾಡಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಇನ್ನು ಕೆಲವು ಆಸ್ತಿಗಳನ್ನು ಬಿಟ್ಟು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.6 ದಾವಾ ಆಸ್ತಿಯಲ್ಲಿ ಕಿರಾಣಿ ಅಂಗಡಿ ನಡೆಸುತ್ತಿದ್ದಾನೆ ಎನ್ನುವುದು ಸರಿ. ಈ ದಾವೆ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.